ಜಲಭವನ
ನಂ..6, ಮೊದಲನೇ ಹಂತ, ಮೊದಲನೇ ಫೇಸ್,
ಬಿಟಿಎಂ ಲೇಔಟ್, ಬನ್ನೇರುಘಟ್ಟ, ರಸ್ತೆ,
ಬೆಂಗಳೂರು-5600029

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು**

**ಸಂಖ್ಯೆ:ಕಜಮ/ಹೆಚ್‌ಆರ್‌ಡಿ14/ಮಾನವ ಸಂಪನ್ಮೂಲ/ವಾಹನಚಾಲಕರ ನೇ.ನೇ./ 910 /2019-20/ ದಿನಾಂಕ: 6/8/19**

## : ಅಧಿಸೂಚನೆ :

1. ಕನನೀಸ ಮತ್ತು ಒಚ ಮಂಡಳಿಯಲ್ಲಿ 19 ಚಾಲಕರ ಹುದ್ದೆಗೆ ನಿಗಧಿತ ನಮೂನೆಯಲ್ಲಿ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಅರ್ಹರಾಗಿರ ತಕ್ಕದ್ದು. ಅರ್ಜಿಯನ್ನು ಹಾಕಲು ಬಯಸುವ ಅರ್ಹ ಅಭ್ಯರ್ಥಿಗಳು ನಿಗಧಿತ ನಮೂನೆಯನ್ನು ಮಂಡಳಿಯ ಜಾಲತಾಣ www.kuwsdb.org ರಲ್ಲಿ ಪಡೆಯಬಹುದು.

2. **ನೇಮಕಾತಿ ವಿಧಾನ:**

   ಅಭ್ಯರ್ಥಿಗಳ ಆಯ್ಕೆಯನ್ನು ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮಗಳು ಹಾಗೂ ಈ ಬಗ್ಗೆ ಕಾಲಕಾಲಕ್ಕೆ ಹೊರಡಿಸಿರುವ ತಿದ್ದುಪಡಿಗಳನ್ವಯ ಮಾಡಲಾಗುವುದು.

3 **ಕನಿಷ್ಟ ವಿದ್ಯಾರ್ಹತೆ:**

   ಅಭ್ಯರ್ಥಿಗಳು ಕನಿಷ್ಟ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು, ಹಾಗೂ ಬಾರಿ/ಲಘು ವಾಹನ ಪ್ರಯಾಣಿಕ ವಾಹನಚಾಲನದಾಯಕ/ಲಘು ಸರಕು ವಾಹನ ಚಾಲನಾ ಪರವಾನಗಿಯನ್ನು ಹೊಂದಿರತಕ್ಕದ್ದು. ಹಾಗೂ ಈ ಬಗ್ಗೆ ಕನಿಷ್ಠ 03 ವರ್ಷಗಳ ಅನುಭವವನ್ನು ವಾಹನ ಚಾಲನೆಯಲ್ಲಿ ಹೊಂದಿರತಕ್ಕದ್ದು. ಅಭ್ಯರ್ಥಿಯು ಕನ್ನಡ ಭಾಷೆಯಲ್ಲಿ ಭಾಷಾ ಜ್ಞಾನವನ್ನು ಹೊಂದಿರತಕ್ಕದ್ದು.

4 **ವೇತನ ಶ್ರೇಣಿ:**

   ರೂ. 21400-500-22400-550-24600-600-27000-650-29600-750-32600-850-36000-950-39800-1100-42000

**5. ಹುದ್ದೆಯ ವರ್ಗೀಕರಣ:**

**(ಹೈದ್ರಬಾದ್- ಕರ್ನಾಟಕ ಪ್ರಾದೇಶಿಕ) ಸ್ಥಳೀಯ ವೃಂದ ಹುದ್ದೆಗಳು :**

| ವರ್ಗದ ಹೆಸರು | ಇತರೆ | ಗ್ರಾಮೀಣ ಅಭ್ಯರ್ಥಿಗಳು | ಕನ್ನಡ ಮಾಧ್ಯಮ | ಒಟ್ಟು |
|---|---|---|---|---|
| ಸಾಮಾನ್ಯ ವರ್ಗ | 1 | - | - | 1 |
| ಪರಿಶಿಷ್ಟ ಜಾತಿ | 1 | - | - | 1 |
| ಒಟ್ಟು | 2 | - | - | 2 |

| ರೆಸಿಡ್ಯೂಯಲ್ ಕೇಡರ್ (ಮೂಲ ವೃಂದದ ಹುದ್ದೆಗಳು) | | | | |
|---|---|---|---|---|
| ವರ್ಗದ ಹೆಸರು | ಇತರೆ | ಗ್ರಾಮೀಣ ಅಭ್ಯರ್ಥಿಗಳು | ಕನ್ನಡ ಮಾಧ್ಯಮ | ಒಟ್ಟು |
| ಸಾಮಾನ್ಯ ವರ್ಗ | 7 | 2 | - | 9 |
| ಪರಿಶಿಷ್ಟ ಜಾತಿ | 2 | - | - | 2 |
| ಪರಿಶಿಷ್ಟ ಪಂಗಡ | 1 | - | - | 1 |
| ಪ್ರವರ್ಗ-I | 1 | - | - | 1 |
| ಪ್ರವರ್ಗ-II ಎ | 2 | 1 | - | 3 |
| ಪ್ರವರ್ಗ-II ಬಿ | 1 | - | - | 1 |
| ಒಟ್ಟು | 14 | 3 | - | 17 |

6 **ಪರೀಕ್ಷಾರ್ಥ ಅವಧಿ:**

ನೇಮಕಗೊಂಡ ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ 2 ವರ್ಷದ ಅವಧಿಗೆ ಒಳಪಟ್ಟಿರುತ್ತಾನೆ.

7 **ವಯೋಮಿತಿ:**

ಕರ್ನಾಟಕ ನಾಗರೀಕ ಸೇವೆ (ನೇರ ನೇಮಕಾತಿ) ನಿಯಮಗಳು 1977 ರ ನಿಯಮ 6(1)ರ ಪ್ರಕಾರ ಅಭ್ಯರ್ಥಿಯು ಕನಿಷ್ಠ 18 ವರ್ಷಗಳ ವಯೋಮಿತಿಯನ್ನು ಹೊಂದಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿಯನ್ನು ವರ್ಗಗಳ ಅನುಸಾರವಾಗಿ ಮೀರತಕ್ಕದ್ದಲ್ಲ.

ಎ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1ರ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷಗಳ ವಯೋಮಿತಿ.

ಬಿ) ಪ್ರವರ್ಗ-IIಎ, IIಬಿ, IIIಎ, IIIಬಿ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಗರಿಷ್ಠ ವಯೋಮಿತಿ 38 ವರ್ಷಗಳು. ಹಾಗೂ

ಸಿ) ಇತರೆ ಸಾಮಾನ್ಯ ವರ್ಗದವರಿಗೆ ಗರಿಷ್ಠ ವಯೋಮಿತಿ 35 ವರ್ಷಗಳು

ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 6 (3) ಹಾಗೂ ನಿಯಮ 6(1)ರಲ್ಲಿ ಏನೇ ಒಳಗೊಂಡಿದಾಗ್ಯೂ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಯ ಗರಿಷ್ಠ ವಯೋಮಿತಿಯನ್ನು ಈ ಕೆಳಕಂಡ ಪ್ರಕರಣಗಳಲ್ಲಿ ವ್ಯಾಪ್ತಿಗನುಸಾರವಾಗಿ ಹೆಚ್ಚಿಸಲು ಪರಿಗಣಿಸಲಾಗಿದೆ.

ಕರ್ನಾಟಕ ನಾಗರೀಕ ಸೇವೆ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 6 (1)ರಂತೆ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಯ ಗರಿಷ್ಠ ವಯೋಮಿತಿಯನ್ನು ಈ ಕೆಳಕಂಡ ಪ್ರಕರಣಗಳಲ್ಲಿ ವ್ಯಾಪ್ತಿಗನುಸಾರವಾಗಿ ಹೆಚ್ಚಿಸಲು ಪರಿಗಣಿಸಲಾಗಿದೆ.

(1)ಒಂದು ವೇಳೆ ಅಭ್ಯರ್ಥಿಯನ್ನು ಸೇವೆಯಲ್ಲಿದ್ದಲ್ಲಿ ಅಥವಾ ಕರ್ನಾಟಕ ಸರ್ಕಾರದಡಿಯಲ್ಲಿ ಹುದ್ದೆಯನ್ನು ಹೊಂದಿದ್ದಲ್ಲಿ ಅಥವಾ ಕರ್ನಾಟಕ ಸರ್ಕಾರದ/ಕೇಂದ್ರ ಸರ್ಕಾರದ ಕಾಯ್ದೆಯಡಿಯಲ್ಲಿ ಸ್ಥಾಪಿಸಲಾದ ಕಾರ್ಪೋರೇಷನ್‌ಗಳಲ್ಲಿ ಅಥವಾ ಕರ್ನಾಟಕ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಕಾಯ್ದೆಯಡಿಯಲ್ಲಿ ಹಾಗೂ ಸರ್ಕಾರದ ಕಾಯ್ದೆಯಡಿಯಲ್ಲಿ ಮತ್ತು ಋಣಿಯಾಗಿರುವ ಅಥವಾ ಕರ್ನಾಟಕ ಸರ್ಕಾರದ ಅಧೀನದಲ್ಲಿ ಚಾಲ್ತಿಯಲ್ಲಿದ್ದು, ಸೇವೆ ಸಲ್ಲಿಸುತ್ತಿರುವ ಅಥವಾ ಕನಿಷ್ಠ 10 ವರ್ಷಗಳ ಸೇವೆಯನ್ನು ಸಲ್ಲಿಸುತ್ತಿದ್ದು ಇವೆರಡರಲ್ಲಿ ಯಾವುದು ಕಡಿಮೆಯೋ ಅದು.

- ಕನಿಷ್ಠ ಹಾಗೂ ಗರಿಷ್ಠ ವಯೋಮಿತಿಯನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಪರಿಗಣಿಸಲಾಗುವುದು.

**ಅರ್ಜಿಯನ್ನು ಸಲ್ಲಿಸುವ ವಿಧಾನ:**

- ಅರ್ಜಿಯನ್ನು ಆಫ್‌ಲೈನ್ ಮೂಲಕ ಸಲ್ಲಿಸಬಹುದಾಗಿರುತ್ತದೆ.
- ಅರ್ಜಿಯ ನಮೂನೆಯನ್ನು ಮಂಡಳಿಯ ಜಾಲತಾಣ www.kuwsdb.org ಡೌನಲೋಡ್ ಮಾಡಿ ಪಡೆಯಬಹುದಾಗಿದ್ದು, ಭರ್ತಿಮಾಡಿ ಅರ್ಜಿಯ ಶುಲ್ಕ ಪಾವತಿಸಿರುವಲ್ಲಿ ಚಲನ್‌ನನ್ನು ಲಗತ್ತಿಸಿ ನೊಂದಣಿ ಸ್ವೀಕೃತಿ ಅಂಚೆ ಮೂಲಕ ಕಳುಹಿಸಬಹುದು
- ಮೇಲೆ ತಿಳಿಸಿರುವ ವಿಧಾನವನ್ನು ಹೊರತುಪಡಿಸಿ ಬೇರೆ ಯಾವುದೇ ವಿಧಾನದಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

8 **ಅರ್ಜಿಯ ಶುಲ್ಕ:**

- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1 ರ ವರ್ಗದ ಅರ್ಜಿದಾರರು ಅರ್ಜಿ ಶುಲ್ಕವಾಗಿ ರೂ.50/-ಗಳನ್ನು ಪಾವತಿಸತಕ್ಕದ್ದು.
- ಉಳಿದ ಪಂಗಡದ ಅರ್ಜಿದಾರರು ರೂ.250/-ಗಳನ್ನು ಅರ್ಜಿ ಶುಲ್ಕವಾಗಿ ಪಾವತಿಸತಕ್ಕದ್ದು.

**ಶುಲ್ಕವನ್ನು ಪಾವತಿಸುವ ವಿಧಾನ:**

ಅಭ್ಯರ್ಥಿಗಳು ಅರ್ಜಿಯ ಶುಲ್ಕವನ್ನು ಈ ಕೆಳಕಂಡ ವಿಧಾನದ ಮೂಲಕ ಪಾವತಿಸಬಹುದು.

- ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ ಬೆಂಗಳೂರು ಇವರ ಹೆಸರಿನಲ್ಲಿ ಡಿಡಿ. ಪಡೆದು ಸಲ್ಲಿಸಬಹುದು.
- ಎಲ್ಲಾ ಅಭ್ಯರ್ಥಿಗಳು ಶುಲ್ಕ ಪಾವತಿಸಿದ ಬಗ್ಗೆ ಚಲನ್ ಅನ್ನು ದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು.
- ಒಂದು ಬಾರಿ ಪಾವತಿಸಿದ ಅರ್ಜಿಯ ಶುಲ್ಕವನ್ನು ಹಿಂದಕ್ಕೆ ನೀಡತಕ್ಕದ್ದಲ್ಲ.

9 **ಆಯ್ಕೆ ಮಾಡಲು ಅನುಸರಿಸುವ ಮಾನದಂಡಗಳು :**

- ವಾಹನ ಚಾಲನೆಯಲ್ಲಿ ನಡೆಸಲಾಗುವ ಪರೀಕ್ಷೆಯಲ್ಲಿ ಪಡೆದ ಅಂಕಗಳಲ್ಲಿ ಶೇ.50 ರಷ್ಟು.
- ಸರ್ಕಾರದ ಸೇವೆಯಲ್ಲಿ (ಖಾಯಂ/ಗುತ್ತಿಗೆ/ಹೊರಗುತ್ತಿಗೆ ಆಧಾರ)ಅಥವಾ ಕರ್ನಾಟಕ ಸರ್ಕಾರದ/ ಕೇಂದ್ರ ಸರ್ಕಾರದ ಕಾಯ್ದೆಯಡಿಯಲ್ಲಿ ಸ್ಥಾಪಿಸಲಾದ ಕಾರ್ಪೋರೇಷನ್‌ಗಳಲ್ಲಿ ಅಥವಾ ಕರ್ನಾಟಕ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಕಾಯ್ದೆಯಡಿಯಲ್ಲಿ ಬರುವ ಸಂಸ್ಥೆಗಳಲ್ಲಿ ಮತ್ತು ಋಣಿಯಾಗಿರುವ ಅಥವಾ ಕರ್ನಾಟಕ ಸರ್ಕಾರದ ಅಧೀನದ ಸಂಸ್ಥೆಗಳಲ್ಲಿ ಸಲ್ಲಿಸಿರುವ ಹಿಂದಿನ ಸೇವೆಗೆ – ಶೇ 50ರಷ್ಟು

10 **ಮೀಸಲಾತಿಯನ್ನು ಬಯಸುವ ಅರ್ಜಿದಾರರು:**

ಎ. ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಕ್ಕೆ ಸೇರುವ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಸಕ್ಷಮ ಪ್ರಾಧಿಕಾರದವರು ನಿಗಧಿತ ನಮೂನೆಯಲ್ಲಿ ಹೊರಡಿಸಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

- ಗ್ರಾಮೀಣ ಅಭ್ಯರ್ಥಿಯ ಮೀಸಲಾತಿಯನ್ನು ಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರಿಗಳು ನೀಡಿರುವ ಪ್ರಮಾಣಪತ್ರಗಳನ್ನು ಸಲ್ಲಿಸತಕ್ಕದ್ದು.

**ಬಿ.** ಹೆಚ್ಚಿನ ವಯೋಮಿತಿಗೆ ವಿನಾಯಿತಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದವರು ಹೊರಡಿಸಿರುವ ಸೂಕ್ತ ಪ್ರಮಾಣಪತ್ರವನ್ನು ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಸಲ್ಲಿಸತಕ್ಕದ್ದು ಹಾಗೂ ಅದರ ಪ್ರತಿಯನ್ನು ಅರ್ಜಿ ಸಲ್ಲಿಸುವಾಗ ಸಲ್ಲಿಸತಕ್ಕದ್ದು.

**ಸಿ.** ಅರ್ಜಿದಾರರು ಅಥವಾ ಆಭ್ಯರ್ಥಿಯು ಭಾರತದ ಒಕ್ಕೂಟ / ಕರ್ನಾಟಕ ಸರ್ಕಾರ ಹಾಗೂ ಅಧೀನ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಲ್ಲಿ. ಸಂಬಂಧಪಟ್ಟ ಪ್ರಾಧಿಕಾರಗಳಿಂದ ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ಹಾಗೂ ಕೈಗೊಳ್ಳುವ ಪರೀಕ್ಷೆಗಳ ಸಂದರ್ಭದಲ್ಲಿ ಸಲ್ಲಿಸತಕ್ಕದ್ದು ವಯೋಮಿತಿಯ ವಿನಾಯಿತಿಯನ್ನು ಪಡೆಯಲು ಇಚ್ಛಿಸುವ ಅರ್ಜಿದಾರರು ಸದರಿ ಇಲಾಖೆಗಳಲ್ಲಿ ಸಲ್ಲಿಸಿರುವ ಸೇವಾವಧಿ ಬಗ್ಗೆ ನಮೂದಿಸಿರ ತಕ್ಕದ್ದು.

**ಡಿ.** ಮೇಲಿನ ಕ್ರಮಸಂಖ್ಯೆ:10 **ಎ** ಯಿಂದ **ಸಿ** ವರೆಗಿನ ಸೌಲಭ್ಯಗಳನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರಗಳನ್ನು ಅರ್ಜಿಸಲ್ಲಿಸಲು ನಿಗಧಿಪಡಿಸಿರುವ ದಿನಾಂಕದೊಳಗಾಗಿ ಹೊಂದಿರತಕ್ಕದ್ದು ಹಾಗೂ ಅರ್ಜಿಯೊಂದಿಗೆ ಪ್ರಮಾಣಪತ್ರಗಳ ಪ್ರತಿಯನ್ನು ಲಗತ್ತಿಸತಕ್ಕದ್ದು.

11

- ಸರ್ಕಾರಿ ಇಲಾಖೆಗಳಲ್ಲಿ / ಒಂದು ವೇಳೆ ಅಭ್ಯರ್ಥಿಯು ಕರ್ನಾಟಕ ಸರ್ಕಾರದಡಿಯಲ್ಲಿ ಹುದ್ದೆಯನ್ನು ಹೊಂದಿದ್ದಲ್ಲಿ (ಖಾಯಂ/ಗುತ್ತಿಗೆ/ಹೊರಗುತ್ತಿಗೆ ಆಧಾರ)ಅಥವಾ ಕರ್ನಾಟಕ ಸರ್ಕಾರದ/ ಕೇಂದ್ರ ಸರ್ಕಾರದ ಕಾಯ್ದೆಯಡಿಯಲ್ಲಿ ಸ್ಥಾಪಿಸಲಾದ ಕಾರ್ಪೋರೇಷನ್‌ಗಳಲ್ಲಿ ಅಥವಾ ಕರ್ನಾಟಕ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಕಾಯ್ದೆಯಡಿಯಲ್ಲಿ ಬರುವ ಸಂಸ್ಥೆಗಳಲ್ಲಿ ಮತ್ತು ಋಣಿಯಾಗಿರುವ ಅಥವಾ ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ಹಿಂದಿನ ಅನುಭವ ಪಡೆದಿರುವ ಹಿನ್ನಲೆಯಲ್ಲಿ, ಹೆಚ್ಚಿನ ಸೌಲಭ್ಯವನ್ನು ಪಡೆಯಲು ಬಯಸುವ ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದಿರುವ ಅನುಭವ ಪ್ರಮಾಣ ಪತ್ರ ಹಾಗೂ ಮೊದಲ ಹಾಗೂ ಕೊನೆಯ ಇತ್ತೀಚಿಗೆ ನೀಡಲಾದ ವೇತನ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

12 ಮೂಲ ದಾಖಲಾತಿಗಳ ಪರಿಶೀಲನಾ ಸಂದರ್ಭದಲ್ಲಿ ವಿದ್ಯಾರ್ಹತೆ, ಜನ್ಮ ದಿನಾಂಕ ಹಾಗೂ ಜಾತಿ ಮೀಸಲಾತಿಯಡಿಯಲ್ಲಿ ಸೌಲಭ್ಯ ಪಡೆಯಲು ಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಿಗಳು ನೀಡಿರುವ ಮೂಲ ಪ್ರಮಾಣಪತ್ರಗಳನ್ನು ಒದಗಿಸತಕ್ಕದ್ದು.

13 ಹೈದ್ರಬಾದ್- ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಅಭ್ಯರ್ಥಿಗಳು ಜಿಲ್ಲಾ/ ತಾಲ್ಲೂಕು ಮಟ್ಟದ ಸಕ್ಷಮ ಪ್ರಾಧಿಕಾರಿಗಳು ನೀಡಿದ ಮೂಲ ಅರ್ಹ ಪ್ರಮಾಣ ಪತ್ರವನ್ನು **ಅನುಬಂಧ-ಎ** ನಲ್ಲಿ ಮತ್ತು ವಾಸಸ್ಥಳ ಪ್ರಮಾಣಪತ್ರಗಳನ್ನು **ಅನುಬಂಧ-ಬಿ** ನಲ್ಲಿ ಮೂಲ ದಾಖಲೆಗಳ ಪರಿಶೀಲನಾ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ಹಾಗೂ ಪ್ರಮಾಣಪತ್ರಗಳ ಪ್ರತಿಯನ್ನು ಅರ್ಜಿಯ ಜೊತೆಗೆ ಲಗತ್ತಿಸಿ ಸಲ್ಲಿಸತಕ್ಕದ್ದು.

14 ಅಭ್ಯರ್ಥಿಗಳು ಓದುತ್ತಿರುವ ಶಾಲೆಯಿಂದ ನೀಡಲಾದ ನಡತೆ ಪ್ರಮಾಣ ಪತ್ರವನ್ನು ಹಾಗೂ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ನೀಡಿದ ನಡತೆ ಪ್ರಮಾಣ ಪತ್ರವನ್ನು ಅರ್ಜಿಯ ಜೊತೆಗೆ ಸಲ್ಲಿಸತಕ್ಕದ್ದು.

15 ಅಭ್ಯರ್ಥಿಗಳು ವಾಹನ ಚಾಲನೆ ಪರೀಕ್ಷೆಗೆ / ಸಂದರ್ಶನಕ್ಕೆ ತನ್ನ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

16 ಯಾವುದೇ ಒಬ್ಬ ಅಭ್ಯರ್ಥಿಯು ಬಾಹ್ಯ ಅಥವಾ ಯಾವುದೇ ರೀತಿಯ ಹಸ್ತಕ್ಷೇಪ ಮಾಡಿದ್ದೇ ಆದಲ್ಲಿ ಅಂತಹ ಅಭ್ಯರ್ಥಿಯ ಉಮೇದು ದಾಯಿತ್ವವನ್ನು ಅನರ್ಹಗೊಳಿಸಲಾಗುವುದು.

17 ಅಭ್ಯರ್ಥಿಗಳು ನೀಡಿರತಕ್ಕ ಯಾವುದೇ ಮಾಹಿತಿಯು ಸುಳ್ಳು ಎಂದು ಕಂಡುಬಂದಲ್ಲಿ ಅಂತಹ ಅವನ / ಅವಳ ಉಮೇದು ದಾಯಿತ್ವವನ್ನು ರದ್ದುಪಡಿಸಲಾಗುವುದು ಹಾಗೂ ಅಂತಹ ಅಭ್ಯರ್ಥಿಗಳ ವಿರುದ್ಧ ಕಾನೂನು ಕ್ರಮವನ್ನು ಜರುಗಿಸಲಾಗುವುದು.

18 ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮೇಲೆ ನೀಡಲಾದ ಎಲ್ಲಾ ನಿರ್ದೇಶನಗಳನ್ನು ಅರ್ಜಿ ಸಲ್ಲಿಸುವ ಮುನ್ನ ನಿಗಧಿಪಡಿಸಿದ ವಿದ್ಯಾರ್ಹತೆ ಬಗ್ಗೆ ವಯೋಮಿತಿ ಬಗ್ಗೆ ಅರ್ಜಿ ಶುಲ್ಕ ಹಾಗೂ ನೇಮಕಾತಿಯ ಮಾನದಂಡಗಳ ಹಾಗೂ ಇತರೆ ಮಾಹಿತಿಗಳನ್ನು ಎಚ್ಚರಿಕೆಯಿಂದ ಓದಿ ಕೊಳ್ಳುವುದು.

19 **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:**

ದಿ:**20.08.2019**ರ ಸಂಜೆ **5:00** ಘಂಟೆಯೊಳಗಾಗಿ ಮೇಲೆ ತಿಳಿಸಿರುವ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ವಿಳಂಬವಾಗಿ ಸ್ವೀಕರಿಸಲಾದ ಅರ್ಜಿಗಳನ್ನು ಅಥವಾ ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

20 ನೇಮಕಾತಿ ಪ್ರಕ್ರಿಯೆ ಸಂದರ್ಭದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಹೊರಡಿಸಿರುವ ನೇಮಕಾತಿ ಅಧಿಸೂಚನೆಯನ್ನು ರದ್ದು/ಹಿಂತೆಗೆತ/ತಿದ್ದುಪಡಿ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

**ವ್ಯವಸ್ಥಾಪಕ ನಿರ್ದೇಶಕರು**
ಕರ್ನಾಟಕ ನಗರ ನೀರು ಸರಬರಾಜು ಮತ್ತು
ಒಳಚರಂಡಿ ಮಂಡಳಿ,
ಬೆಂಗಳೂರು

## KARNATAKA URBAN WATER SUPPLY & DRAINAGE BOARD

APPLICATION FORM FOR THE POST OF DRIVERS

| |
|---|
| Paste Latest Passport size photograph (Self-attested) |

1. Full Name (in block letters)
2. Father's name
3. Date of Birth (in Christian Era)
4. Age as on closing date of receipt of application
5. Permanent Address

6. Correspondence Address

7. Educational Qualification
8. Nationality
9. You belong to which category (Tick ✓ mark in the appropriate Box)

| GM | SC | ST | Cat 1 | IIA | II B | III A | IIIB |
|---|---|---|---|---|---|---|---|
| | | | | | | | |

10. Your candidature comes under (Tick ✓ mark in the appropriate Box)

| Rural | Kannada Medium |
|---|---|
| | |

11. Whether you belongs to Hydrabad Karnataka Region (Tick ✓ mark in the appropriate Box)

| Yes | No |
|---|---|
| | |

12. Particulars of Issue of Driving License with validity (LMV & HMV separately)

13. Whether copy of extract of Driving License issued by concerned RTO Authorities is enclosed

| Yes | No |
|---|---|
| | |

14. Driving Experience period in LMV: From __________ To__________
    Name of the institution/firms etc

15. Driving Experience period in HMV: From __________ To__________
    Name of the institution/firms etc

16. Details of previous service From __________ To__________

17. Any other relevant information

Place: Signature of the candidate

Date:

Application must be signed by the candidate.

1. Self attested Photo copies of the following certificates should be enclosed with the duly filled application form.
   a) Age proof
   b)Educational Qualification
   c) Driving experience certificate as indicated above
   d) SC/ST/OBC certificate issued by Competent Authority
   e) Valid Driving License
   f) Candidates belonging to Rural may obtain 10 years study certificate from School and the same may be authorized by the concerned Block Education Officer.
   f) In case of Candidates those who have studied in Kannada Medium may produce the Certificate issued by the concerned Block Education Officer
   h) First and Last Salary Certificate issued by the Competent Authority
2. Two copies of recent passport size photographs signed across by the candidate